ಜೊತೆ ಸೇರಿ ನಾನು ಕುಣಿಯೋಣ ಎಂದೆನ್ನಿಸಿಬಿಡುತ್ತದೆ. ಆದರೆ ಯಾರಾದರೂ ನೋಡಿಯಾರೋ ಎಂಬ ಭಯದಲ್ಲೇ ಆ ಆಸೆ ಹಾಗೇ ಉಳಿದುಬಿಟ್ಟಿದೆ. ಈ ಎಲ್ಲಾ ಅಂಶವನ್ನು ಗಮನಿಸುವಾಗ ಭಾರತೀಯರ ಹೆಚ್ಚಿನ ಆಚರಣೆಗಳಲ್ಲಿ ಸಂಗೀತ ವಾದ್ಯ, ವಿಶೇಷವಾಗಿ ಶಬ್ದಕ್ಕೆ ಮಹತ್ತರವಾದ ಸ್ಥಾನವಿರುವಂತೆ ತೋರುತ್ತದೆ.

ಇನ್ನೂ ಒಂದು ನೆನಪನ್ನು ಇಲ್ಲಿ ಹೇಳಲೇಬೇಕು. ನಾನು ಪದವಿಯಲ್ಲಿ ಪತ್ರಿಕೋದ್ಯಮ ಓದುವಾಗ ಆಕಾಶವಾಣಿಯಲ್ಲಿ ಯುವವಾಣಿಯಂತಹ ಕಾರ್ಯಕ್ರಮವನ್ನು ರೂಪಿಸಬೇಕಿತ್ತು. ಮಡಿಕೇರಿ ಆಕಾಶವಾಣಿಯ ಮೊದಲ ಭೇಟಿಯಲ್ಲಿಯೇ ನನಗೊಂದು ಅಚ್ಚರಿಯೊಂದು ಕಾದಿತ್ತು. ಅಲ್ಲಿಯ ಗ್ರಂಥಾಲಯದಲ್ಲಿ ಹಳೆಯ ಹಲವಾರು ಗ್ರಾಮಫೋನ್ ಪ್ಲೇಟ್‌ಗಳಿದ್ದವು, ಎರಡು ಸ್ಟ್ಯಾಂಡ್‌ಗೆ ಅಳವಡಿಸಿಟ್ಟ ಬಳಸದೇ ಹಾಗೇ ಇಟ್ಟ ಗ್ರಾಮಫೋನ್‌ಗಳಿದ್ದವು. ನಾನು ಸಂಶೋಧನೆ ಮಾಡುವ ಸಂದರ್ಭದಲ್ಲಿ ಉಡುಪಿಯ ಎಂಜಿಎಂ ಕಾಲೇಜಿನ ಗೋವಿಂದ ಪೈ ಸಂಶೋಧನಾ ಕೇಂದ್ರದ ಡಿಜಿಟಲ್ ಸೆಂಟರ್‌ಗೆ ಭೇಟಿ ಕೊಟ್ಟಾಗಲೂ ಈ ಗ್ರಾಮಫೋನ್ ಮತ್ತು ಪ್ಲೇಟ್‌ಗಳು ಕಣ್ಣಿಗೆ ಬಿದ್ದವು. ಬಾಪ ಹೇಳಿ ಗೊತ್ತಿದ್ದ ಗ್ರಾಮಫೋನ್ ಕಣ್ಣಾರೆ ಕಾಣುವ ಅವಕಾಶ ಈ ಎರಡು ಸ್ಥಳಗಳಲ್ಲಿ ನನಗೆ ಸಿಕ್ಕಿತ್ತು. ಈಗಿನ ಡಿಜೆ ಪ್ಲೇಯರ್ ಹೆಚ್ಚು ಕಮ್ಮಿ ಗ್ರಾಮಫೋನ್ ಮಾದರಿಯಲ್ಲಿರುವಂತೆ ಅನ್ನಿಸಿತು. ಮಾತ್ರವಲ್ಲ ಆ ಗ್ರಾಮಫೋನ್ ಪ್ಲೇಟ್‌ನಲ್ಲಿ ಇದ್ದ ದಾಖಲೆಗಳನ್ನು ಮಡಿಕೇರಿ ಆಕಾಶವಾಣಿಯು ಮತ್ತು ಗೋವಿಂದ ಪೈ ಸಂಶೋಧನಾ ಕೇಂದ್ರವು ಆಧುನಿಕ ಎಂಪಿ3 ಮಾದರಿಗೆ ಪರಿವರ್ತಿಸಿಕೊಂಡಿದೆ.

ಕಳೆದ ಎರಡು ವರ್ಷಗಳಿಂದ ನಾನು ದಿನಂಪ್ರತಿ ಕಾಲೇಜಿಗೆ ಓಡಾಡುವುದು ಧನಲಕ್ಷ್ಮಿ ಎಂಬ ಖಾಸಗಿ ಬಸ್ಸಿನಲ್ಲಿ. ಬೆಳಗ್ಗೆ ಒಂದು ಗಂಟೆ ಪ್ರಯಾಣದುದ್ದಕ್ಕೂ ಅಯ್ಯಪ್ಪ ಸ್ವಾಮಿಯ ಭಕ್ತಿಗೀತೆಗಳನ್ನು ಮಾತ್ರ ಹಾಕುವ ಬಸ್ಸ್ ಡ್ರೈವರ್ ಸಂಜೆ ಹಿಂದಿರುಗಿ ಬರುವ ಒಂದು ಗಂಟೆಯ ಪ್ರಯಾಣದಲ್ಲಿ ಹಳೆಯ ಕನ್ನಡ ಹಾಡುಗಳಿಗೆ ಬದಲಾಗಿರುತ್ತಾನೆ. ಈಗಂತೂ ಆ ಎಲ್ಲಾ ಭಕ್ತಿಗೀತೆಗಳು, ಕನ್ನಡ ಹಳೆಯ ಹಾಡುಗಳು ನನ್ನ ನಾಲಗೆಯ ತುದಿಯಲ್ಲಿ ಸಲೀಸಾಗಿ ನಲಿದಾಡುತ್ತಿವೆ. ಕೆಲವು ಬಾರಿ ಹಾಗೇ ಗುನುಗುನಿಸುತ್ತಿರುತ್ತೇನೆ. ಆ ಬಸ್ಸಲ್ಲದೆ ಇನ್ನಾವ ಬಸ್ಸಿನಲ್ಲಿ ಹೋದರೂ ಆ ದಿನ ಒಂದು ರೀತಿಯ ಖಾಲಿತನವನ್ನುಂಟು ಮಾಡಿ ಬಿಡುವಷ್ಟು ಆ ಬಸ್ಸಿನ ಲಾಲಿತ್ಯ ನನ್ನೊಳಗೆ ಇಳಿದುಬಿಟ್ಟಿದೆ ಎಂದೆನ್ನಿಸುತ್ತದೆ. ಯಾವ ಹಾಡಾದರೇನೂ ನಮ್ಮೊಳಗೆ ಇಳಿದು ಮನ ಕಲಕಿದರಾಯಿತು ಎಂಬ ತತ್ತ್ವ ನನ್ನದು, ನನ್ನುಮ್ಮನದು, ನನ್ನ ಬಾಪನದು, ಜೊತೆಗೆ ನನ್ನ ಉಪ್ಪಾಪನದ್ದು.



2016ರಲ್ಲಿ ಅಧ್ಯಾಪಕನಾಗಿದ್ದಾಗ ಸಿಕ್ಕ ಮೊದಲ ಸಂಬಳದಲ್ಲಿ ಉಮ್ಮ ಮತ್ತು ಬಾಪನಿಗಾಗಿ ಫಿಲಿಪ್ಸ್ ಕಂಪೆನಿಯ ರೇಡಿಯೋವನ್ನು ಮಂಗಳೂರಿನಿಂದ ಕೊಂಡಿದ್ದೆ. ಅಸ್ತಮಾ ಕಾರಣ ಆಕ್ಸಿಜನ್ ಕಿಟ್ ಮೂಲಕ ಉಸಿರಾಡುತ್ತಿದ್ದ ಬಾಪ ನಡೆಯಲು ಆಗದಿದ್ದ ಸಂದರ್ಭದಲ್ಲಿಯೂ ರೇಡಿಯೋ ಕೇಳುವುದನ್ನು ಬಿಟ್ಟಿರಲಿಲ್ಲ. ಬಾಪನ ಮರಣದ ಹಿಂದಿನ ದಿನದವರೆಗೂ ರೇಡಿಯೋದ ಧ್ವನಿ ನಿಶ್ಯಬ್ದವಾಗಲೇ ಇಲ್ಲ. ಶಬ್ದಗಳ ಜೊತೆಯಲ್ಲಿ ಕಾಲ ಮುಂದುವರೆಯುತ್ತಲಿರುವಾಗ ಶಬ್ದ ಪಸರಿಸುವ ಪರಿಕರ ಬದಲಾಗಬಹುದು. ಕಾಲ ನಿಲ್ಲುವುದಿಲ್ಲ. ಆದರೂ ಎಲ್ಲೋ ಓದಿದ ನೆನಪು ಇಸ್ಲಾಂ ಪ್ರಕಾರ ವಾದ್ಯ ಸಂಗೀತ ಹರಾಂ ಅಂತೆ...ಅಬ್ಬರದ ಧ್ವನಿಯೂ ಹರಾಂ ಅಂತೆ.....ಹೌದಾ ನೀವೇ ಉತ್ತರಿಸಬೇಕು.

●